# ಹಸಿರು ಪ್ರತಿಷ್ಠಾನ

ಬೆಂಗಳೂರು

---

ದಿನಾಂಕ: 28-11-2022

**ದಿನಾಂಕ: 28-11-2022 ರಂದು ಮಧ್ಯಾಹ್ನ 12.30ಕ್ಕೆ ಪ್ರೆಸ್ ಕ್ಲಬ್ ಆವರಣದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆ**

## ರೈತಾಪಿ ಯುವ ಕೃಷಿಕರನ್ನು ಕಾಡುತ್ತಿರುವ ಸಾಮಾಜಿಕ ಪಿಡುಗು

ಇತ್ತೀಚೆಗೆ ಗ್ರಾಮೀಣ ಪ್ರದೇಶದಲ್ಲಿ ಕೃಷಿಯಲ್ಲಿ ತೊಡಗಿಕೊಂಡಿರುವ ಯುವಕರಿಗೆ ಸಾಮಾಜಿಕ ಪಿಡುಗೊಂದು ಕಾಡುತ್ತಿದೆ. ಕೃಷಿಕ ಯುವಕರು ಆರ್ಥಿಕವಾಗಿ ಪ್ರಬಲರಾಗಿದ್ದರು ಕೂಡ ಅವರನ್ನು ಮದುವೆಯಾಗಲು ಯುವತಿಯರು ನಿರಾಕರಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದು ಹೀಗೆಯೇ ಮುಂದುವರೆದರೆ ಇದೊಂದು ಸಾಮಾಜಿಕ ಪಿಡುಗಾಗಿ ದೊಡ್ಡ ಸಮಸ್ಯೆ ಉಂಟಾಗುತ್ತದೆ. ಈಗಾಗಲೇ ಈ ಸಾಮಾಜಿಕ ಪಿಡುಗು ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆಯೆಂದು ನಾವು ಪತ್ರಿಕೆಗಳನ್ನು ಓದಿದ್ದೇವೆ. ವ್ಯವಸಾಯವನ್ನು ಮಾಡಿ ದೇಶಕ್ಕೆ ಆಹಾರ ಉತ್ಪಾದನೆಯಲ್ಲಿ ತೊಡಗಿಕೊಂಡಿರುವ ರೈತಾಪಿ ಯುವಕರು ಜಿಗುಪ್ಸೆಗೊಂಡು ಪಟ್ಟಣ ಪ್ರದೇಶದತ್ತ ವಲಸೆ ಹೋಗುವ ಕಾಲ ದೂರವಿಲ್ಲ. ಇದರಿಂದ ದೇಶದಲ್ಲಿ ಆಹಾರ ಉತ್ಪಾದನೆ ಕೊರತೆ ಉಂಟಾಗಿ ತುರ್ತು ಪರಿಸ್ಥಿತಿ ಉಂಟಾಗುವುದು ನಿಶ್ಚಿತ.

ದೇಶಕ್ಕೆ ಆಹಾರ ಉತ್ಪಾದನೆ ಮಾಡುವಲ್ಲಿ ಕೃಷಿಕರ ಪಾತ್ರ ಮಹತ್ತರವಾದುದು. ದೇಶಕ್ಕೆ ಸೈನಿಕನ ಪಾತ್ರ ಎಷ್ಟು ಮುಖ್ಯವೋ ಅದೇ ರೀತಿ ದೇಶಕ್ಕಾಗಿ ಆಹಾರ ಉತ್ಪಾದನೆ ಮಾಡುವ ಕೃಷಿಕನ ಪಾತ್ರವೂ ಮಹತ್ವವಾದುದು. ರೈತ ದೇಶದ ಬೆನ್ನೆಲುಬು ಎಂದು ಬೊಬ್ಬೆ ಹೊಡೆಯುವ ರಾಜಕಾರಣಿಗಳು ಗ್ರಾಮೀಣ ಯುವ ಕೃಷಿಕರ ಬಗ್ಗೆ ಚಿಂತಿಸಿ, ಚರ್ಚಿಸಿ, ಪರಿಹಾರವನ್ನು ನೀಡಬೇಕು. ಈ ಬಗ್ಗೆ ರಾಜ್ಯ ಸರ್ಕಾರದ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಮಂತ್ರಿ ಮಹೋದಯರು, ಶಾಸಕರುಗಳು ಗ್ರಾಮೀಣ ಪ್ರದೇಶದ ರೈತಾಪಿ ಯುವಕರ ಬದುಕಿನ ಬಗ್ಗೆ ಗಮನಹರಿಸಿ, ಈ ಕುರಿತು ವಿಧಾನ ಮಂಡಲದ ಅಧಿವೇಶನದಲ್ಲಿ ಚರ್ಚಿಸಿ, ಯೋಜನೆಯೊಂದನ್ನು ರೂಪಿಸಿ ರೈತಾಪಿ ಯುವಕರನ್ನು ವಿವಾಹವಾಗುವ ಹೆಣ್ಣು ಮಕ್ಕಳಿಗೆ ಷರತ್ತು ಬದ್ಧವಾಗಿ 10 ಲಕ್ಷ ರೂ.ಗಳ ಪ್ರೋತ್ಸಾಹ ಧನ ಸೇರಿದ ವಿಶೇಷ ಪ್ಯಾಕೇಜ್‌ನ್ನು ಸರ್ಕಾರ ಘೋಷಿಸಬೇಕು. ಸರ್ಕಾರವು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕೃಷಿಯಲ್ಲಿ ತೊಡಗಿಕೊಂಡ ರೈತಾಪಿ ಯುವಕರ ಬದುಕಿಗೆ ಒಂದು ಪರಿಹಾರವನ್ನು ನೀಡಬೇಕು.

---

ಈಗಾಗಲೇ ಅತಿವೃಷ್ಟಿ-ಅನಾವೃಷ್ಟಿ, ಬರಗಾಲ, ವಿವಿಧ ಕಾರಣಗಳಿಂದ ರೈತರು, ಕೂಲಿ ಕಾರ್ಮಿಕರು, ಕುಶಲಕರ್ಮಿಗಳು ಹಲವಾರು ಕಾರಣಗಳಿಂದ ಹಳ್ಳಿಗಳಿಂದ ಪಟ್ಟಣದತ್ತ ವಲಸೆ ಬಂದಿರುತ್ತಾರೆ. ಈಗ ಉಳಿದಿರುವ ಅಲ್ಪ ಸ್ವಲ್ಪ ರೈತಾಪಿ ಯುವಕರು ವ್ಯವಸಾಯದಲ್ಲಿ ತೊಡಗಿಸಿಕೊಂಡು ಆಹಾರ ಉತ್ಪಾದನೆ ಮಾಡಿ ದೇಶಕ್ಕೆ ನೆರವಾಗುತ್ತಿದ್ದಾರೆ. ಈ ರೈತಾಪಿ ಯುವಕರು ಆರ್ಥಿಕವಾಗಿ ಸದೃಢರಾಗಿದ್ದರೂ ಕೂಡ ಯುವತಿಯರು ಮದುವೆಯಾಗಲು ನಿರಾಕರಿಸಿದರೆ, ಉದ್ಯೋಗಸ್ಥ ಯುವಕರನ್ನು ಮಾತ್ರ ಯುವತಿಯವರು ಮದುವೆಯಾಗಲು ಇಚ್ಛಿಸುತ್ತಾರೆ ಎಂದುಕೊಂಡು ಇವರೂ ಕೂಡ ಕೃಷಿಯನ್ನು ಕೈಬಿಟ್ಟು, ಉದ್ಯೋಗವನ್ನು ಅರಸಿಕೊಂಡು ಪಟ್ಟಣಕ್ಕೆ ಸೇರಿದರೆ ಆಹಾರ ಉತ್ಪಾದನೆ ಮಾಡುವವರು ಯಾರು ? ದೇಶಕ್ಕೆ ಆಹಾರ ಉತ್ಪಾದನೆ ಕುಂಠಿತವಾಗಿ ಪರಿಸ್ಥಿತಿ ಏನಾಗಬಹುದು ?

ಆದುದರಿಂದ ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಎಚ್ಚೆತ್ತುಕೊಂಡು ಗ್ರಾಮೀಣ ಪ್ರದೇಶದ ರೈತಾಪಿ ಯುವಕರನ್ನು ಕಾಡುತ್ತಿರುವ ಈ ಸಾಮಾಜಿಕ ಪಿಡುಗಿಗೆ ಪರಿಹಾರ ರೂಪಿಸಬೇಕು. ಪಕ್ಷ ಭೇದ ಮರೆತು ಎಲ್ಲಾ ಶಾಸಕರು ಒಗ್ಗಟ್ಟಾಗಿ ರೈತಾಪಿ ಯುವಕರ ಬದುಕಿಗೆ ಒಂದು ಅರ್ಥವನ್ನು ರೂಪಿಸಿಕೊಡುವಲ್ಲಿ ಚಿಂತಿಸಿ, ಪರಿಹಾರವನ್ನು ಸರ್ಕಾರದಿಂದ ಕೊಡಿಸಿಕೊಡಬೇಕು. ಸರ್ಕಾರವು ಕೂಡಲೇ ವಿಧಾನ ಮಂಡಲದ ಅಧಿವೇಶನದಲ್ಲಿ ಇದನ್ನು ಚರ್ಚಿಸಿ, ಗ್ರಾಮೀಣ ರೈತಾಪಿ ಯುವಕರನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ಷರತ್ತುಬದ್ಧವಾಗಿ 10 ಲಕ್ಷ ರೂ.ಗಳ ಪ್ರೋತ್ಸಾಹ ಧನ ಸೇರಿದ ಪ್ಯಾಕೇಜ್ ಘೋಷಿಸಬೇಕು ಅಲ್ಲದೆ ಇದಕ್ಕೆ ಒಂದು ಪ್ರತ್ಯೇಕವಾಗಿ ಆಯೋಗವನ್ನು ರಚಿಸಿ, ಪರಿಹಾರ ಕೈಗೊಂಡು ಈ ಸಾಮಾಜಿಕ ಪಿಡುಗನ್ನು ನಿವಾರಿಸಿ ಗ್ರಾಮೀಣ ರೈತಾಪಿ ಯುವಕರ ಬದುಕಿಗೊಂದು ಅರ್ಥ ಕಲ್ಪಿಸಬೇಕೆಂದು ಹಸಿರು ಪ್ರತಿಷ್ಠಾನವು ಸರ್ಕಾರವನ್ನು ತೀವ್ರವಾಗಿ ಒತ್ತಾಯಿಸುತ್ತದೆ.

ಪತ್ರಿಕಾ ಗೋಷ್ಠಿಯಲ್ಲಿ ಹಸಿರು ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ.ಕುಮಾರ್, ಕಾರ್ಯಾಧ್ಯಕ್ಷ ಪಿ.ಕೆ. ಕುಮಾರ್, ಗೌರವಾಧ್ಯಕ್ಷ ಎ.ಎಸ್. ಗೋವಿಂದೇಗೌಡ, ಕೋಶಾಧ್ಯಕ್ಷ ಕೆ. ವೇಣುಗೋಪಾಲ್, ಕಾರ್ಯದರ್ಶಿ ಬಿ. ರವೀಶ್ ಗೌಡ, ಮಾರ್ಗದರ್ಶಕರು ಹಾಗೂ ಒಕ್ಕಲಿಗರ ಸಂಘದ ನಿರ್ದೇಶಕರಾದ ಡಾ|| ಟಿ.ಹೆಚ್. ಆಂಜನಪ್ಪ ರವರು ಉಪಸ್ಥಿತರಿದ್ದು ಮಾತನಾಡಿದರು.

(ಕೆ.ಜಿ. ಕುಮಾರ್)
ಅಧ್ಯಕ್ಷರು
ಮೊ: 93428 94654

ನಂ.26, 1ನೇ ಕ್ರಾಸ್, ದೊಡ್ಡಣ್ಣ ಇಂಡಸ್ಟ್ರಿಯಲ್ ಮೈನ್ ರೋಡ್, ಬೆಂಗಳೂರು-560 091.